# ‘ಕುರೂಪ ಪ್ರಶಸ್ತಿ’ ಪಡೆದ ಹ್ಯಾಪಿ ಫೇಸ್!

ಪ್ರವೀಣ ಕುಲಕರ್ಣಿ



ಚಿತ್ರದಲ್ಲಿರುವುದು ಯಾವ ಪ್ರಾಣಿ ಅಂತ ನಿಮಗನಿಸುತ್ತದೆ? ಬಾಯಿಯಲ್ಲಿ ಹಲ್ಲುಗಳಿಲ್ಲ. ಮುಖ ಸೊಟ್ಟಗಾಗಿದೆ. ನಾಲಿಗೆ ಹೊರಚಾಚಿದೆ. ತುಪ್ಪಳ ಎಲ್ಲ ಉದುರಿಹೋಗಿದ್ದು, ನೆತ್ತಿಯನ್ನು ಬಿಟ್ಟರೆ ಮೈಮೇಲೆ ಉಳಿದೆಲ್ಲಿಯೂ ಕೂದಲಿಲ್ಲ. ಘೋರರೂಪದ ಕತ್ತೆಕಿರುಬ ಇಲ್ಲವೇ ಮುಸುವನ ರೂಪಾಂತರದಂತೆ ಅಥವಾ ಗೊರಿಲ್ಲಾದ ತಮ್ಮನಂತೆ ಕಾಣುವ ಈತನ ಹೆಸರು ಮಿಸ್ಟರ್ ಹ್ಯಾಪಿ ಫೇಸ್! ಪ್ರಸಕ್ತ ಸಾಲಿನಲ್ಲಿ ‘ಜಗತ್ತಿನ ಅತ್ಯಂತ ಕುರೂಪದ ನಾಯಿ’ ಎಂಬ ಪ್ರಶಸ್ತಿಗೆ ಭಾಜನವಾದ ಶ್ವಾನ ಮಹಾಶಯ ಈತ!

ಈ ಹ್ಯಾಪಿ ಫೇಸ್, ಒಂದು ಕಾಲಕ್ಕೆ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿ ಯಾರೊಬ್ಬರೂ ತಿರುಗಿ ನೋಡದಂತಹ ಸನ್ನಿವೇಶದಲ್ಲಿ ಬದುಕಿದ್ದವ. ದೇಹಕ್ಕೆ ಭಾರವಾದ ಗೆಡ್ಡೆಗಳು ಮಾತ್ರವಲ್ಲದೆ ನರರೋಗದ ಸಮಸ್ಯೆಗಳಿಂದಲೂ ಏಗಿದಾತ. ಮೂತ್ರದ ಸಮಸ್ಯೆಯನ್ನು ಎದುರಿಸುತ್ತಿದ್ದ ಈತನಿಗೆ ಸದಾ ಡಯಪರ್ ಬೇರೆ ಬೇಕೇಬೇಕು. ಸೀದಾ ನಿಲ್ಲಲು ಆತನಿಗೆ ಆಗದು. ತಲೆಯನ್ನು ಈಗಲೂ ಓರೆಯಾಗಿ ಹಿಡಿಯುವ ಈತನಿಗೆ 17 ವರ್ಷ ವಯಸ್ಸು. ಈತನ ಮೂಲ ಚೀನಾ ದೇಶವಂತೆ.

ನಾಯಿಗಳನ್ನು ದತ್ತು ಪಡೆಯಲು ಉತ್ತೇಜಿಸುವ ಸಲುವಾಗಿ ಕಳೆದ ಐವತ್ತು ವರ್ಷಗಳಿಂದ ಅಮೆರಿಕದ ಕ್ಯಾಲಿಫೋರ್ನಿಯಾದ ಪೆಟಾಲುಮಾ ಎಂಬಲ್ಲಿ ಈ ಸ್ಪರ್ಧೆಯನ್ನು ಏರ್ಪಡಿಸಲಾಗುತ್ತಿದೆ (ಕೋವಿಡ್ ಕಾರಣದಿಂದ 2020 ಮತ್ತು 2021ರಲ್ಲಿ ಸ್ಪರ್ಧೆ ನಡೆದಿರಲಿಲ್ಲ). ಈ ಸ್ಪರ್ಧೆಗೆ ಹ್ಯಾಪಿ ಫೇಸ್‌ನನ್ನು ಕರೆದೊಯ್ದ ಅರಿಜೋನಾದ ಸಂಗೀತ ಕಲಾವಿದೆ ಜೆನೆಡಾ ಬೆನಲಿ, ಪ್ರಾಣಿಗಳ ಆರೈಕೆ ಕೇಂದ್ರದಿಂದ ಆತನನ್ನು ದತ್ತು ಪಡೆದಿದ್ದಾರೆ.

‘ಹ್ಯಾಪಿ ಫೇಸ್, ಅರ್ಹ ಚಾಂಪಿಯನ್ ಎನ್ನುವುದರಲ್ಲಿ ಯಾವುದೇ ತೀರ್ಪುಗಾರರಿಗೆ ಅನುಮಾನ ಇರಲಿಲ್ಲ. ಜೀವನದಲ್ಲಿ ಎದುರಾದ ಎಲ್ಲ ಸವಾಲುಗಳನ್ನು ಮೆಟ್ಟಿನಿಂತ ಈತನಿಗೆ ಅಲ್ಲದೆ ಬೇರೆ ಯಾರಿಗೆ ಪ್ರಶಸ್ತಿ ಕೊಡಬೇಕು’ ಎಂದು ಪ್ರಶ್ನಿಸುತ್ತಾರೆ, ತೀರ್ಪುಗಾರರಲ್ಲಿ ಒಬ್ಬರಾಗಿದ್ದ ದೇಬ್ರಾ ಮ್ಯಾಥಿ. ಈ ಚಾಂಪಿಯನ್ ಪಟ್ಟದಿಂದ ಹ್ಯಾಪಿ ಫೇಸ್‌ನ ಒಡತಿ ಜೆನೆಡಾ ಅವರಿಗೆ 1,500 ಡಾಲರ್ (ಸುಮಾರು 1.20 ಲಕ್ಷ ರೂಪಾಯಿ) ಬಹುಮಾನ ಸಿಕ್ಕಿದೆ. ಅಲ್ಲದೆ, ‘ಟುಡೆ’ ಶೋನಲ್ಲಿ ಪಾಲ್ಗೊಳ್ಳಲು ಇಬ್ಬರಿಗೂ ನ್ಯೂಯಾರ್ಕ್ ನಗರಕ್ಕೆ ಹೋಗುವ ಅವಕಾಶವೂ ಸಿಕ್ಕಿದೆ.

ತುಪ್ಪಳವಿಲ್ಲದ, ಮೆಳ್ಳೆಗಣ್ಣಿನ ಅಥವಾ ಅಸಮಾನ ಕಿವಿಗಳಿಂದ ಕುರೂಪವಾಗಿ ಕಾಣುವ ನಾಯಿಗಳನ್ನು ದತ್ತು ಪಡೆಯಲು ಈ ಸ್ಪರ್ಧೆ ಶ್ವಾನಪ್ರಿಯರ ಮೇಲೆ ದೊಡ್ಡ ಪ್ರಮಾಣದಲ್ಲಿ ಪ್ರಭಾವ ಬೀರುವುದಂತೆ. ಈ ಸಲದ ಸ್ಪರ್ಧೆಯ ಅಂತಿಮ ಸುತ್ತಿಗೆ ಎಂಟು ಶ್ವಾನ ಮಹಾಶಯರು ಆಯ್ಕೆಯಾಗಿದ್ದವು. ಅವುಗಳು ಕೆಂಪುಹಾಸಿನ ಮೇಲೆ ಹೆಜ್ಜೆ ಹಾಕಿದ್ದರು. ಆದರೆ, ಎಲ್ಲರನ್ನೂ ಸೂರೆಗೊಂಡಿದ್ದ ಮಾತ್ರ ಹ್ಯಾಪಿ ಫೇಸ್.

ಪ್ರಾಣಿಗಳ ಆರೈಕೆ ಕೇಂದ್ರದಲ್ಲಿ ಅದರ ತಪಾಸಣೆ ನಡೆಸಿದ್ದ ಪಶುತಜ್ಞರು, ಹ್ಯಾಪಿ ಫೇಸ್ ಹೆಚ್ಚೆಂದರೆ ಒಂದು ತಿಂಗಳು ಬದುಕಬಹುದು. ಅಲ್ಲದೆ, ಆತನಿಗೆ ಬದುಕಿನ ಕೊನೆಯವರೆಗೆ ಔಷಧೋಪಚಾರ ಬೇಕೇಬೇಕು ಎಂದು ಹೇಳಿದ್ದರು. ಆತನ ಆರೈಕೆಗೆ ಹೆಚ್ಚಿನ ಸಮಯ ಮೀಸಲಿಡಬೇಕು ಎನ್ನುವುದು ಗೊತ್ತಿದ್ದರೂ ಇದರಿಂದ ವಿಚಲಿತರಾಗದ ಬೆನಲಿ ಆತನನ್ನು ದತ್ತು ಪಡೆದುಕೊಂಡು ಬಂದರು. ಮನೆಯಲ್ಲಿ ಅವರು ತೋರಿದ ಕಾಳಜಿಯಿಂದ ಹ್ಯಾಪಿ ಫೇಸ್, ಹತ್ತು ತಿಂಗಳಿನಿಂದ ಆರಾಮವಾಗಿದ್ದಾನೆ. ‘ವಯಸ್ಸಾದ ನಾಯಿಯಾದರೇನು? ಅವುಗಳಿಗೂ ಕುಟುಂಬ ಮತ್ತು ಪ್ರೀತಿ ಎರಡೂ ಬೇಕು’ ಎನ್ನುತ್ತಾರೆ ಬೆನಲಿ.

‘ಜಗತ್ತಿನಲ್ಲಿ ನಾನು ಕಂಡ ಅತ್ಯಂತ ಅಪರೂಪದ ಪ್ರಾಣಿ ಈತ. ಮೊದಲ ನೋಟದಲ್ಲೇ ಆತ ನನ್ನನ್ನು ದತ್ತು ಪಡೆಯುವಂತೆ ಒತ್ತಾಯಿಸಿದ. ಆತನ ಪೂರ್ವಾಪರವನ್ನು ವಿಚಾರಿಸುವ ಗೋಜಿಗೆ ಹೋಗದ ನಾನು ಆ ಕ್ಷಣವೇ ಆತನನ್ನು ಮನೆಗೆ ಕರೆದುಕೊಂಡು ಹೋಗಲು ನಿರ್ಧರಿಸಿದೆ’ ಎಂದೂ ಅವರು ಹೇಳುತ್ತಾರೆ. 1970ರ ದಶಕದಲ್ಲಿ ‘ಜಗತ್ತಿನ ಅತ್ಯಂತ ಕುರೂಪದ ನಾಯಿ’ ಸ್ಪರ್ಧೆಯನ್ನು ಆರಂಭಿಸಲಾಯಿತು. ಈ ಸ್ಪರ್ಧೆಗೆ ಶ್ವಾನಗಳನ್ನು ಕರೆತರುವುದು ಅಷ್ಟು ಸುಲಭವಲ್ಲ. ಅವುಗಳ ಸಂಪೂರ್ಣ ಆರೋಗ್ಯ ತಪಾಸಣೆ ಮಾಡಿಸಿ, ಅವುಗಳು ಆರೋಗ್ಯಪೂರ್ಣವಾಗಿವೆ ಎನ್ನುವ ಪ್ರಮಾಣಪತ್ರವನ್ನು ತರಬೇಕು. ‘ಅನಿಮಲ್ ಪ್ಲಾನೆಟ್’ ಚಾನೆಲ್‌ನಿಂದ ಈ ಕುರಿತು ಚಿತ್ರ ನಿರ್ಮಾಣವನ್ನೂ ಮಾಡಲಾಗಿದೆ. ‘ಎಲ್ಲ ನಾಯಿಗಳು ಒಂದೊಂದು ವಿಧದಲ್ಲಿ ಅನನ್ಯವಾಗಿರುತ್ತವೆ. ಅವುಗಳನ್ನು ಸಮಾನವಾಗಿ ಪ್ರೀತಿಸಬೇಕು ಎನ್ನುವುದೇ ನಮ್ಮ ಈ ಸ್ಪರ್ಧೆಯ ಹಿಂದಿರುವ ಮುಖ್ಯ ಸಂದೇಶ’ ಎಂದು ಸಂಘಟಕರು ಹೇಳುತ್ತಾರೆ.

ಅಂತೂ ಪ್ರಶಸ್ತಿಯೊಂದನ್ನು ಗೆದ್ದಿರುವ ಹ್ಯಾಪಿ ಫೇಸ್, ತನ್ನ ಪರಿವಾರದವರ ಕುರಿತು ಜಗತ್ತೆಲ್ಲ ಮಾತನಾಡುವಂತೆ ಮಾಡಿದ್ದಾನೆ!

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65